


ನಮ್ಮ ಸಂಸ್ಕೃತಿಯ ಹಿರಿಮೆಗೆ ಕಾರಣರಾದ ಮಹಾನ್ ವ್ಯಕ್ತಿಗ ಜೀವನ ಚಿಂತನೆಗಳನ್ನು ಈ ವಿಭಾಗವು ನಿಮಗೆ ಸಂಕ್ಷಿಪ್ತವಾಗಿ ಪರಿಚಯಿಸುತ್ತದೆ. ಲೇಖಕರು ಪತ್ರಿಕೆಯ ಸಿಬ್ಬಂದಿವರ್ಗ ದಲ್ಲೊಬ್ಬರು.

ಜನಸಾಮಾನ್ಯರ ವಾಸ್ತವದ ಗ್ರಹಿಕೆಗಳನ್ನು ಗೌರವಿಸುತ್ತ ನೂರು ಮಾತುಗಳಲ್ಲಿ ಹೇಳಲಾಗದ್ದನ್ನು ಮೂರು ಸಾಲುಗಳ (ತ್ರಿಪದಿ) ಸುಲಭವಾದ ಕನ್ನಡ ಪದ್ಯದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಿ ಕನ್ನಡಕ್ಕೆ ವಿಶೇಷ ಮನ್ನಣೆಯನ್ನು ಸಂಪಾದಿಸಿ ಕೊಟ್ಟಿರುವ ಅಪೂರ್ವ ಕವಿ ಸರ್ವಜ್ಞ. ಹೀಗಾಗಿ ಸರ್ವಜ್ಞನು ಎಲ್ಲರಿಗೂ ತಿಳಿದಿರುವುದು ಆತನ ತ್ರಿಪದಿಗಳಿಂದಲೇ ಎಂದರೆ ಅತಿಶಯೋಕ್ತಿಯೇನಲ್ಲ. ತನ್ನ ವೈಚಾರಿಕ ಉದ್ದೇಶಕ್ಕೆ ತ್ರಿಪದಿಯೇ ಅತ್ಯಂತ ಯೋಗ್ಯವಾದ ಛಂದಸ್ಸೆಂದು ಬಗೆದ ಈತನಿಗೆ 'ತ್ರಿಪದಿ ಚಕ್ರವರ್ತಿ' ಎಂಬ ಬಿರುದು ಸೂಕ್ತವಾಗಿದೆ. ಸರ್ವಜ್ಞನಿಗಿಂತ ಬಹಳ ಹಿಂದೆಯೇ ಶಾಸನಗಳಲ್ಲಿಯೂ ವಚನಗಳಲ್ಲಿಯೂ ತ್ರಿಪದಿಗಳು ಧಾರಾಳವಾಗಿ ಬಳಕೆ ಯಾಗಿದ್ದರೂ ವಚನಗಳ ಶ್ರೇಷ್ಠ ಪರಂಪರೆಯನ್ನು ಅರಗಿಸಿ ಕೊಂಡು ಅದರ ಮೂಲಕವೇ ತಾನು ಹೇಳಬೇಕಾದ್ದನ್ನು ಜನರಿಗೆ ತಿಳಿಯಾಗಿ, ಸ್ಪಷ್ಟವಾಗಿ ಮನಸ್ಸಿನಲ್ಲಿ ಬಿಂಬಿಸುವಂತೆ ಮಾಡುವ ಕಲೆ ಸರ್ವಜ್ಞನಿಗೆ ಸಿದ್ಧಿಸಿತ್ತು.

ಇತರ ಅನೇಕ ಕವಿಗಳ ವಿಷಯದಲ್ಲಿ ಆಗಿರುವಂತೆಯೆ, ಸರ್ವಜ್ಞನ ಕಾಲ, ದೇಶ ಮುಂತಾದ ವಿಷಯಗಳಲ್ಲಿ ಖಚಿತವಾಗಿ ಯಾವ ಸಂಗತಿಗಳೂ ತಿಳಿದುಬಂದಿಲ್ಲ. ಅವನ ಕಾಲವು ಸುಮಾರು ೧೬-೧೭ನೆಯ ಶತಮಾನ ಎಂದು ನಂಬಲಾಗಿದೆ. ಈತನ ತ್ರಿಪದಿಗಳಲ್ಲೇ ಈತನ ಜೀವನದ ಕೆಲವು ವಿವರಗಳು ಉಕ್ತವಾಗಿದ್ದರೂ ಈ ರಚನೆಗಳು ಪ್ರಕ್ಷಿಪ್ತ ಗಳಾಗಿರುವ ಸಾಧ್ಯತೆಯೂ ಇರುವುದರಿಂದ ಈತನ ಜೀವನದ ಬಗ್ಗೆ ಖಚಿತವಾಗಿ ಯಾವ ಸಂಗತಿಗಳೂ ತಿಳಿದುಬಂದಿಲ್ಲ. ಅವುಗಳಲ್ಲಿ ವ್ಯಕ್ತಗೊಂಡಿರುವ ಕೆಲವು ಅಂಶಗಳು: ಪುಷ್ಪದತ್ತ ನೆಂಬ ಗಣನಾಥನ ಅವತಾರವೆಂದು ಹೇಳಲಾದ ಸರ್ವಜ್ಞ ಹುಟ್ಟಿದ್ದು ಧಾರವಾಡ ಜಿಲ್ಲೆಯ ಅಂಬಲೂರಿನಲ್ಲಿ. ಇದೇ



ಜಿಲ್ಲೆಯ ಮಾಸೂರಿನ ಬಸವರಸನೆಂಬ ಆರಾಧ್ಯ ಬ್ರಾಹ್ಮಣ ಇವನ ತಂದೆ, ಮಾಳಿಯೆಂಬ ಕುಂಬಾರಗಿತ್ತಿ ಇವನ ತಾಯಿ. ಇವರ ನಡುವಣ ವಿವಾಹಬಾಹಿರ ಸಂಬಂಧದಿಂದ ಇವನ ಜನನ.

ಸರ್ವಜ್ಞ ಎಂದರೆ ಎಲ್ಲವನ್ನೂ ತಿಳಿದವನು. ಆದರೆ ಎಲ್ಲವನ್ನೂ ತಿಳಿಯುವ ಸಾಮರ್ಥ್ಯವಿರುವುದು ಸರ್ವಶಕ್ತನಾದ, ಸರ್ವಾಂತರ್ಯಾಮಿಯಾದ ಭಗವಂತನೊಬ್ಬನಿಗೇ. ಆದ್ದರಿಂದ ಅಂತಹ ಜ್ಞಾನಸ್ವರೂಪನಾದ ಭಗವಂತನನ್ನೇ ತನ್ನ ರಚನೆಗಳ ಅಂಕಿತವಾಗಿಟ್ಟುಕೊಂಡಿರುವ ಸಾಧ್ಯತೆ ಇದೆ. ವಚನಕಾರರ, ಕೀರ್ತನಕಾರರ ರಚನೆಗಳ ಕೊನೆಯಲ್ಲಿ ಕೂಡಲಸಂಗಮದೇವ, ಗುಹೇಶ್ವರ, ಪುರಂದರ ವಿಠ್ಠಲ ಇತ್ಯಾದಿ ಅಂಕಿತಗಳನ್ನು ಕಾಣ ಬಹುದು. ಅಂತೆಯೇ ಸರ್ವಜ್ಞ ಎಂಬ ಯಾವುದೇ ನಿರ್ದಿಷ್ಟ ದೇವತೆಯಿಲ್ಲದಿದ್ದರೂ ಪರತತ್ತ್ವದ ಸಾಂಕೇತಿಕ ಸ್ತುತಿ ಈತನ ರಚನೆಗಳ ಅಚ್ಚುಮೆಚ್ಚಿನ ಅಂಕಿತ. **ಒಬ್ಬ ಸರ್ವಜ್ಞ ಕರ್ತನು. ಜಗಕೆಲ್ಲ ಒಬ್ಬನೇ ದೈವ!** ಎಂಬ ನುಡಿ ಸರ್ವಜ್ಞನ ಮತಾತೀತ ವಾದ ವಿಶಾಲ ದೃಷ್ಟಿಯನ್ನು, ಉದಾತ್ತವಾದ ತತ್ತ್ವವನ್ನು, ಅವನ ಬೋಧನೆಯ ಸಾರ್ವಕಾಲಿಕತೆಯನ್ನು ತಿಳಿಸುತ್ತದೆ. ಈತನಿಗೆ ತನ್ನವರು ನನ್ನವರು ಎಂಬ ಅಭಿಮಾನವಾಗಲೀ ಭೇದಭಾವವಾಗಲೀ ಇಲ್ಲ. ತಾನು ಕಂಡದ್ದನ್ನು ಕಂಡಂತೆ ಹೇಳುವುದೇ ಈತನ ವಿಶಿಷ್ಟ ಗುಣ.

ಸರ್ವಜ್ಞನೆಂಬುವನು । ಗರ್ವದಿಂದಾದವನೆ ।
ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ ।
ಪರ್ವತವೇ ಆದ ಸರ್ವಜ್ಞ ॥

**ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಗಳಿಂ ಕೇಳುತಂ ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ** ಎಂಬ ಸೋಮೇಶ್ವರ ಶತಕದ ಪದ್ಯವನ್ನು ಈ ವಚನ ನೆನಪಿಸುತ್ತದೆ.

ಸರ್ವಜ್ಞನ ವಚನಗಳಲ್ಲಿ ಪ್ರಸ್ತಾಪವಾಗದಿರುವ ವಿಷಯವೇ ಇಲ್ಲ! ಈತನ ವಚನಗಳಿಗೆ ಮಾರುಹೋದವರಿಗೆ ಸರ್ವಜ್ಞ ನೆಂದರೆ ಸರ್ವಸ್ವ. ಬ್ರಹ್ಮಾಂಡದ ರಹಸ್ಯಗಳನ್ನೆಲ್ಲ ಒಳಗೊಂಡಂತಿರುವ ಈತನ ರಚನೆಗಳಲ್ಲಿ ಪಾರಮಾರ್ಥಿಕ ಹಾಗೂ ಲೌಕಿಕ ಎರಡನ್ನೂ ಒಳಗೊಂಡ ಸಮಗ್ರತೆಯ ಜೀವನದರ್ಶನ ವ್ಯಕ್ತವಾಗಿರುವುದನ್ನು ಕಾಣಬಹುದು. ಮನುಷ್ಯನ ಜೀವನಕ್ಕೆ ಹಿರಿಮೆ ಬಂದಿರುವುದು ಸರ್ವವ್ಯಾಪಿ ಯಾಗಿರುವ ದೇವರು ಅವನಲ್ಲಿ ಹೆಚ್ಚು ಅಭಿವ್ಯಕ್ತಗೊಂಡಿರುವು ದರಿಂದ. ಆದ್ದರಿಂದಲೇ—

ಸತ್ಯವೆಂಬುದು ತಾನು । ಹಿತ್ತಲದ ಗಿಡ ನೋಡ ।
ಮತ್ತೆಲ್ಲಿ ನೋಡಿಯಳಸದೆ ತಾನಿರ್ದ ।
ಹತ್ತಿಲೇ ನೋಡ ಸರ್ವಜ್ಞ ॥

ತನಗಿಂತ ಹತ್ತಿರವಾದ ಸ್ಥಳ ಯಾವುದು? ತನ್ನ ಅಂತರಾಳ ದಲ್ಲಿರುವ ಚೈತನ್ಯಕ್ಕಿಂತ ಹೆಚ್ಚಾಗಿ ಅನುಭವಕ್ಕೆ ಬರಬಲ್ಲ ದ್ದಾವುದಿದೆ? ಬಾಹ್ಯ ಪ್ರತಿಮೆಗಳಿಗಿಂತ ತನ್ನಲ್ಲಿಯೇ ಪರಮಾತ್ಮನು ಹೆಚ್ಚಾಗಿ ವಿಕಾಸಗೊಂಡಿರುವುದನ್ನು ಅರಿಯದೇ ಹೋದರೆ ಮನುಷ್ಯನೂ ಕಲ್ಲಿನಂತೆಯೇ ಅಚೇತನನೂ, ಜಡನೂ ಆಗುವುದಿಲ್ಲವೇ? ಮನುಷ್ಯನಲ್ಲಿ ಹುದುಗಿರುವ ಈ ದಿವ್ಯತೆಯ ಶಕ್ತಿಯಿಂದಲೇ ವ್ಯಕ್ತಿ ತನ್ನ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ. ಈ ದಿವ್ಯತೆ ಸುಪ್ತವಾಗಿದ್ದು ಯಾವುದಾದರೂ ಸಾಧನೆಯಲ್ಲಿ ಅದು ಪ್ರಕಟಗೊಳ್ಳಲು ತೀವ್ರವಾದ ಪರಿಶ್ರಮ ಬೇಕು. ಸಾಧನೆಯಲ್ಲಿ ಉತ್ಕಟತೆ ಇರಬೇಕು. ಮೈಗಳ್ಳತನಕ್ಕೆ, ಆಲಸ್ಯಕ್ಕೆ, ಉಡಾಫೆ ಜೀವನಕ್ಕೆ ಯಾವ ಸಿದ್ಧಿಯೂ ಲಭಿಸದು.

ಖಂಡಿಸದೆ ಕರಣವನು । ದಂಡಿಸದೆ ದೇಹವನು ।
ಉಂಡುಂಡು ಸ್ವರ್ಗಕೈದಲ್ಕೆ ಅದನೇನು ।
ರಂಡೆಯಾಳುವಳೆ ಸರ್ವಜ್ಞ ॥

ಎಂಬ ತ್ರಿಪದಿಯಲ್ಲಿ ಸಾಧಕನನ್ನು ಬಡಿದೆಬ್ಬಿಸುವಂಥ ಮಾತುಗಳನ್ನು ಕಾಣಬಹುದು. ಮನುಷ್ಯ ದಿಟ್ಟತನದಿಂದ ಬಾಳನ್ನು ಎದುರಿಸಬೇಕು, ತನ್ನ ಬಾಳಿನ ಹೊಣೆಗಾರಿಕೆಯನ್ನು ತಾನೇ ತೆಗೆದುಕೊಂಡು ಸಾಧನೆಯಲ್ಲಿ ತೊಡಗಬೇಕು ಎಂಬ ಆಶಯ ಇವನ ತ್ರಿಪದಿಗಳಲ್ಲಿ ಎದ್ದು ಕಾಣುತ್ತದೆ. ಬರೀ ದೈವದಿಂದಲೇ ಎಲ್ಲ ನಡೆಯುತ್ತದೆ ಎಂದು ಕೈಕಟ್ಟಿ ಕೂರುವ ಅಧಮಾಧಮ ಮನೋಜಾಡ್ಯ ಸಲ್ಲದು:

ಕೆಡಕು ಕೂಡುವುದೆಂದು । ಅಡವಿಗೋಡಲು ಬೇಡ ।
ಕಡುಭಯದಿ ಭಂಗಗೊಳಬೇಡ ವಿಧಿಯರಿಯ– ।
ದಡವಿಯೊಂದುಂಟೆ ಸರ್ವಜ್ಞ ॥

ಯಾರು ಸ್ವಾವಲಂಬಿಯೋ, ಸ್ವಂತ ಶಕ್ತಿ ಮತ್ತು ಪ್ರಯತ್ನದ ಮೇಲೆಯೇ ತನ್ನ ಬಲವಾದ ಆತ್ಮವಿಶ್ವಾಸವನ್ನು ಪಡೆದಿರು ವನೋ ಅಂಥವನು ಹೆಚ್ಚಾಗಿ ವಿಧಿ, ದೈವ ಮುಂತಾದ ಮಾತುಗಳನ್ನಾಡಲಾರ. ದೈವದ ಮೇಲೆ ಭಾರಹಾಕಿ ಕುಳಿತು ಕೊಳ್ಳಲಾರ, ಅವನು ಪ್ರಯತ್ನಶೀಲನಾಗಿ ಮುಂದಡಿಯಿಡು ವನು.

ಸರ್ವಜ್ಞನ ಒಂದೊಂದು ವಚನವೂ ಸ್ವಯಂಪೂರ್ಣ ವಾದ ಮುಕ್ತಕ ಅಥವಾ ಸುಭಾಷಿತ. ಹೇಳಬೇಕಾದ್ದನ್ನು ಇವನು ಸರಳ ಸುಲಭವಾದ ಶೈಲಿಯಲ್ಲಿ, ಉಪಮಾನ ದೃಷ್ಟಾಂತಗಳ ಮೂಲಕ, ಜನಸಾಮಾನ್ಯರ ಮನಸ್ಸಿಗೆ ನಾಟು ವಂತೆ ಹೇಳುತ್ತಾನೆ. ಆದ್ದರಿಂದಲೇ ಇವನ ತ್ರಿಪದಿಗಳು ಗಾದೆ ಗಳಂತೆ ನಾಡಿನಲ್ಲಿ ಮನೆಮಾತಾಗಿವೆ. ತಮಿಳಿನ ತಿರು ವಳ್ಳುವರ್, ತೆಲುಗಿನ ವೇಮನರಂತೆ ಈತ ಜನತೆಯ ಕವಿ ಯಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಗಳಿಸಿದ್ದಾನೆ.

ಇಂತಹ ಮಾರ್ಮಿಕವಾದ ಸರ್ವಜ್ಞನ ವಚನಗಳನ್ನು ಅತ್ಯಂತ ಆತ್ಮೀಯತೆಯಿಂದ ಅಪಾರ ಕಷ್ಟಗಳನ್ನನುಭವಿಸಿ ಮೊದಲಿಗೆ ಪ್ರಕಟಪಡಿಸಿದವರು ರೆವರೆಂಡ್ ಚೆನ್ನಪ್ಪ ಉತ್ತಂಗಿ. ಈತ ಕ್ರಿಸ್ತಧರ್ಮದ ಪ್ರಚಾರಕ ವೃತ್ತಿಯನ್ನು ಕೈಕೊಂಡಿದ್ದರೂ ಹಲವು ಹತ್ತಾರು ಹಸ್ತಪ್ರತಿಗಳಲ್ಲಿ ಚದರಿಹೋಗಿದ್ದ ಸರ್ವಜ್ಞನ ವಚನಗಳನ್ನು ಅರ್ಧ ಶತಮಾನ ಕಾಲ ಅನಂತ ಶ್ರಮ, ಅಪಾರ ತಾಳ್ಮೆಯಿಂದ ಒಂದೆಡೆ ಸಂಗ್ರಹಿಸಿದರು. ಇಪ್ಪತ್ತು ವಿವಿಧ ಪ್ರತಿಗಳಲ್ಲಿನ ಎರಡು ಸಹಸ್ರ ವಚನಗಳನ್ನು ನಲವತ್ತು ಸಹಸ್ರ ಸಾರಿ ಕಣ್ಣಲ್ಲಿ ಕಣ್ಣಿಟ್ಟು ಓದಿ ಓದಿ ಶುದ್ಧ ಪಾಠ ಸಿದ್ಧಗೊಳಿಸುವ ಹೊತ್ತಿಗೆ ಅವರ ಕಣ್ಣೇ ಮಂಜಾಗಿಹೋಗಿತ್ತು! ರೆ॥ ಉತ್ತಂಗಿಯವರು ತಮ್ಮ ಅನಂತರ (ಉತ್ತಂಗಿಯವರು ತೀರಿಕೊಂಡದ್ದು ೧೯೬೨ರಲ್ಲಿ) ಸರ್ವಜ್ಞ ವಚನಗಳ ಪ್ರಚಾರ ಕಾರ್ಯದ ಕೈಂಕರ್ಯಕ್ಕಾಗಿ ಆರಿಸಿಕೊಂಡು, ಆಶೀರ್ವದಿಸಿದ ವ್ಯಕ್ತಿ—ಚಂದ್ರಶೇಖರ ಜಗತಿ. ಜಗತಿಯವರು ಸರ್ವಜ್ಞನ ಕುರಿತು ಬರೆದ ಈ ಮಾತುಗಳು ಕನ್ನಡಿಗರೆಲ್ಲರಿಗೂ ಹೆಮ್ಮೆ ಯನ್ನು ಉಂಟುಮಾಡುವಂಥವು: “ಸರ್ವಜ್ಞನ ತ್ರಿಪದಿಗಳಲ್ಲಿ ಪ್ರಪಂಚದ ಜ್ಞಾನಭಂಡಾರವೇ ಅಡಗಿದೆ. ಕನ್ನಡದ ಸತ್ವವನ್ನು ಬೀರಿದ ಸರ್ವಜ್ಞ ಕವಿ ವಿಶ್ವಮಾನ್ಯ. ಆತನನ್ನು ನಾವು ಉಳಿಸಿಕೊಳ್ಳಬೇಕು ಮತ್ತು ಅವನಿಂದ ನಾವು ಬಹಳಷ್ಟು ಕಲಿತುಕೊಳ್ಳಬೇಕು. ಪ್ರಾಚೀನ ಹಾಗೂ ಸಮಕಾಲೀನ ಸಾಹಿತ್ಯದ ಸಾರಸತ್ವವನ್ನು ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಜನಸಾಮಾನ್ಯ ರಿಗೆಲ್ಲ ತಿಳಿಯುವಂತೆ ಹೇಳಿದ್ದಾನೆ. ತಾನು ಈ ನಾಡಿನಲ್ಲಿ ಕಣ್ಣಾರೆ ಕಂಡದ್ದನ್ನೆಲ್ಲ ಖಂಡತುಂಡವಾಗಿ, ಯಾವ ತುಂಟ ತನಕ್ಕೂ ಅಂಜದೆ ಸಾರಿ ಹೇಳಿದ ಅವನು ನಿಜಕ್ಕೂ ಕವಿ ಸಾರ್ವಭೌಮ. ಅವನ ತಲೆಯ ಮೇಲೆ ಬೇರೊಂದು ಕೃತ್ರಿಮ ಕಿರೀಟ ಬೇಕಾಗಲಿಲ್ಲ. ಶತಮಾನಗಳು ಉರುಳಿದರೂ ಅವನೊಬ್ಬ ಸದಾ ಬದುಕಿ ಉಳಿಯುವ ಜೀವಂತ ಕವಿ.”